## ಪರಿಸಮಾಪ್ತಿ ಎಲ್ಲೆ ಇರಬೇಕು

ಕಲರ್ಸ್ ಕನ್ನಡದ ಬಹುತೇಕ ಧಾರಾವಾಹಿಗಳು ಬಾಲಿಶ ಎಂದೆನಿಸುತ್ತದೆ. ಎಲ್ಲಾ ಕಥೆಗಳೂ ಒಂದೇ ಅನ್ನಿಸುತ್ತದೆ. ಒಬ್ಬ ಯುವಕ ಅಸಹಾಯಕ ಹೆಣ್ಣಿಗೆ ತಾಳಿ ಕಟ್ಟುತ್ತಾನೆ. ಅದನ್ನು ಯಾರಿಗೂ ಹೇಳಲಾರದ ಪರಿಸ್ಥಿತಿ. ಶ್ರೀಮಂತ ಮನೆಗೆ ಬಡವರ ಮನೆ ಹೆಣ್ಣು ಸೊಸೆ. ಆ ಪಾಪದ ಹುಡುಗಿಯನ್ನು ಕಾಡಲು ಮತ್ತೊಬ್ಬಳು ಹೆಣ್ಣು. ಮನೆಯಲ್ಲಿ ಒಬ್ಬ ಹಾಸ್ಯ ಮಾಡುವ ಕೆಲಸದವನು. ದೇವಸ್ಥಾನದಲ್ಲಿ ಸಿಗುವ ಭವಿಷ್ಯ ನುಡಿಗಳು. ಅದೇ ರಾಗ, ಅದೇ ಹಾಡು. ಹಿಂದೆ ಒಂದು ಕಾದಂಬರಿ ಆಧಾರಿತ ಧಾರಾವಾಹಿ ಪೂರ್ವ ನಿಗದಿತ ಕಂತುಗಳನ್ನು ಹೊಂದಿರುತ್ತಿತ್ತು. ಕಥೆಗೆ ಒಂದು ಅರ್ಥ ಇರುತ್ತಿತ್ತು. ಈಗಿನ ಧಾರಾವಾಹಿಗಳು ಹಳಿ ಇಲ್ಲದ ರೈಲು. 'ಅಗ್ನಿಸಾಕ್ಷಿ'ಯ ನಟರು ಬೇರೆ ಧಾರಾವಾಹಿಗಳಿಗೆ ವರ್ಗವಾಗಿದ್ದಾರೆ. ಆ ಪಾತ್ರಗಳೇ ಇಲ್ಲದೇ ಬೇರೆ ಕಥೆ ಮುಂದುವರಿಯುತ್ತದೆ.

ಅಂಜಲಿ ಮನೆಯವರು ವಿದ್ಯಾವಂತರು. ಶ್ರೀಮಂತರು. ಆದರೂ ಅವಳಿಗೆ ತಾಳಿ ಕಟ್ಟಿದ ಪುಣ್ಯಾತ್ಮನ ಮನೆಗೆ ಅವಳನ್ನು ಸೊಸೆಯಾಗಿ ಕಳಿಸಿ ಕೊಡಲು ಮನೆಯವರೆಲ್ಲಾ ಆ ಮನೆಗೆ ಕೆಲಸದವರಾಗಿ ಇರಲು ಒಪ್ಪಿಕೊಳ್ಳುವುದು ನಿಜ ಜೀವನಕ್ಕೆ ಬಲು ದೂರ. ಒಂದು ಕಡೆ ಹೆಣ್ಣು ಅಬಲೆ ಅಲ್ಲ ಸಬಲೆ ಎಂಬ ಘೋಷಣೆ. ಇನ್ನೊಂದು ಕಡೆ ಕೇವಲ ತಾಳಿ ಕಟ್ಟಿಸಿಕೊಂಡ (ಅದೂ ಯಾರದೋ ಬಲವಂತವಾಗಿ) ಮಾತ್ರಕ್ಕೆ ಆಕೆಗೆ ಬೇರೆ ಬದುಕು ಆಯ್ಕೆ ಮಾಡುವ ಅಧಿಕಾರ ಇರುವುದಿಲ್ಲ ಎಂದರ್ಥ ಕೊಡುವ ಧಾರಾವಾಹಿ. ಇದೆಲ್ಲಾ ತೀರಾ ಹಾಸ್ಯಾಸ್ಪದ.

—ದೀಪ್ತಿ ಕೃಷ್ಣ, ಬೆಂಗಳೂರು

## ಅಗ್ನಿ ಸ್ಪರ್ಶ

ಕಲರ್ಸ್ ಕನ್ನಡದ 'ಅಗ್ನಿಸಾಕ್ಷಿ'ಯಲ್ಲಿ ಈಗ ಒಂದು ಕುಟುಂಬವನ್ನು ಕೆಲಸಕ್ಕೆ ಇಟ್ಟುಕೊಂಡು ಗೋಳು ಹೊಯ್ದುಕೊಳ್ಳುವ ಪ್ರಸಂಗ ತೀರಾ ಅಸಹಜವಾಗಿದ್ದು ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುವ ಪರಾಕಾಷ್ಠೆಯನ್ನು ತಲುಪಿದೆ ಎನ್ನಬಹುದು. ಹೆಸರೇ ಸೂಚಿಸುವಂತೆ ವೀಕ್ಷಕರನ್ನು ಅಗ್ನಿಯಲ್ಲಿ ಸುಡುವಂತೆ ಕಾಣುತ್ತದೆ. ಧಾರಾವಾಹಿ ನಿರ್ಮಾಪಕರು ಇದನ್ನು ಯಾವಾಗ ಕೊನೆಗೊಳಿಸುತ್ತಾರೋ ಎಂದು ಕಾಯುವಂತಾಗಿದೆ.

—ಮಾಧವ ಉದ್ಯಾವರ ಮೈಸೂರು.

ಅಸಹ್ಯ: 'ಅಗ್ನಿಸಾಕ್ಷಿ'ಯ ಸಂಭಾಷಣೆ ಇತ್ತೀಚೆಗಂತೂ ಹಿಗ್ಗಾ ಮುಗ್ಗಾ ಎಳೆಯುತ್ತಿದ್ದು ಅಸಹ್ಯ ತರುವಂತಿದೆ. ಹುಡುಗಿಯ ಮನೆಯವರು ಹುಡುಗನ ಮನೆಗೆ ಬಂದು ಅವಳನ್ನು ಆ ಮನೆಯ ಸೊಸೆಯಾಗಿ ಸ್ವೀಕರಿಸಲಿ ಎಂಬ ಒಂದೇ ಕಾರಣಕ್ಕೆ ಎಲ್ಲರೂ ಕೆಲಸದವರಂತೆ ವಿವಿಧ ಚಾಕರಿಗಳಿಗೆ ಸೇರಿಕೊಳ್ಳುವುದು ಪಾಂಡವರ ಕಾಲದ ಅಜ್ಞಾತವಾಸವನ್ನು ನೆನಪಿಗೆ ತರುತ್ತದೆ. ಈ ಕಂಪ್ಯೂಟರ್ ಯುಗದಲ್ಲಿ ಇದು ಹಾಸ್ಯಾಸ್ಪದವಲ್ಲವೆ?

—ಸರಸ್ವತಿ ಶಂಕರ್, ಬೆಂಗಳೂರು

## ಠಾಣಾಧಿಕಾರಿ ಇಲ್ಲದ ಠಾಣೆ

ಒಂದು ಪೊಲೀಸ್ ಸ್ಟೇಷನ್. ಅಲ್ಲಿ ರಾಜೀವ ಎಂಬ ಹೆಸರಿನ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್. ಆತ ಮಂಗಳಗೌರಿ ಮದುವೆಯಾಗುತ್ತಾನೆ. ಆ ಬಗ್ಗೆ ಅವರ ಮನೆಯಲ್ಲಿ ಯಾರಿಗೂ ಗೊತ್ತಿಲ್ಲ. ಅವಳೊಬ್ಬ ಅನಾಥೆ ಅವಳಿಗೆ ಆಶ್ರಯ ನೀಡಿದ್ದೇನೆ ಎಂದು ಹೇಳಿದ್ದಾನೆ. ಅವಳು ರಾಜೀವನ ಮನೆಯಲ್ಲಿ ಕೆಲಸದ ಆಳು.

ಮದುವೆಯಾದ ಮೇಲೆ ರಾಜೀವ ಕೆಲಸಕ್ಕೆ ಹೋಗುವುದನ್ನೇ ನಿಲ್ಲಿಸಿದ್ದಾನೆ. ಸದಾ ಮನೆಯಲ್ಲೇ ಇದ್ದು ಮಂಗಳಗೌರಿ ಜೊತೆ ರೊಮ್ಯಾನ್ಸ್ ಮಾಡುತ್ತಿರುತ್ತಾನೆ. ಇತ್ತೀಚೆಗೆ ಅವನು ಒಂದು ದಿನವೂ ಪೊಲೀಸ್ ಯುನಿಫಾರ್ಮ್ ಹಾಕಿದ್ದೇ ಇಲ್ಲ. ಠಾಣೆಯಲ್ಲಿರುವ ಇಬ್ಬರು ಪೇದೆಗಳಿಗೆ ರಾಜೀವ ಮತ್ತು ಮಂಗಳ ಗೌರಿಯ ಬಗ್ಗೆ ಮಾತನಾಡುವುದನ್ನು ಬಿಟ್ಟರೆ ಬೇರೆ ಕೆಲಸವೇ ಇಲ್ಲ. ಇಷ್ಟು ದಿನಗಳಲ್ಲಿ ಆ ಪೊಲೀಸ್ ಸ್ಟೇಷನ್ನಿಗೆ ಒಂದೂ ದೂರು ಬಂದಿರುವುದಿಲ್ಲ.

ಇನ್ನು ಮಂಗಳ ಗೌರಿ, ಓಣಿಯ ಹೆಣ್ಣುಮಕ್ಕಳೆಲ್ಲ ಸೇರಿ ಅವಳ ಮುಡಿಯ ಹೂ ಕಿತ್ತು, ಬಳೆ ಒಡೆದು, ಕುಂಕುಮ ಅಳಿಸಿ, ಮಾಂಗಲ್ಯವನ್ನು ಕಿತ್ತು ಹಾಕಲು ಸಿದ್ಧರಾಗಿದ್ದರೂ ಅದನ್ನು ಪ್ರತಿಭಟಿಸದೆ ಮೂಕಪಶುವಿನಂತೆ ಎಲ್ಲವನ್ನು ಸಹಿಸಿಕೊಳ್ಳುವ ದುರ್ಬಲ ಮನಸ್ಸಿನ ಹೆಣ್ಣಾಗಿ ಆಕೆಯನ್ನು ಚಿತ್ರಿಸಲಾಗಿದೆ. ಇದು ವೀಕ್ಷಕರಿಗೆ ಯಾವ ಸಂದೇಶವನ್ನು ರವಾನಿಸಬಲ್ಲದು. ಇಂತಹ ಸಂವೇದನಾ ಶೂನ್ಯ ಕಥೆಯ ಅಗತ್ಯ ಏನಿದೆ.

—ಮುರಲೀಧರ ಕುಲಕರ್ಣಿ, ಬೀದರ್

ವಾರದ ಪತ್ರ

## ನೆನಪಿನಂಗಳದಲ್ಲಿ ಕಣವಿ

ಹಲವು ಕನ್ನಡ ವಾಣಿಜ್ಯ ವಾಹಿನಿಗಳ ಸ್ಪರ್ಧೆಯ ಮಧ್ಯೆಯೂ, ಕನ್ನಡ ಚಂದನ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಅದರಲ್ಲಿ ನಾಡಿನ ಹಿರಿಯ ಲೇಖಕರನ್ನು, ಕವಿಗಳನ್ನು, ಕಲಾವಿದರನ್ನು ಕರೆದು ಪರಿಚಯಿಸುವ ಸುಂದರ ಕಾರ್ಯಕ್ರಮ 'ಶುಭೋದಯ ಕರ್ನಾಟಕ'. ಈಚೆಗೆ ನೆನಪಿನಂಗಳ ಸಂಚಿಕೆಯಲ್ಲಿ ಕನ್ನಡದ ಪ್ರಸಿದ್ಧ ಕವಿ ಚೆನ್ನವೀರ ಕಣವಿ ಅವರ ಸಂದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ನಿರ್ದೇಶಕ ನಿರ್ಮಲಾ ಎಲಿಗಾರ್ ಸಂದರ್ಶಿಸಿದರು. ಕಣವಿ ತಮ್ಮ ಬಾಲ್ಯ, ಪ್ರಾಥಮಿಕ ಶಿಕ್ಷಣವನ್ನು ಸ್ಮರಿಸಿ ಜೀವನಪಯಣದ ಕಿರು ಪರಿಚಯ ಮಾಡಿಕೊಟ್ಟರು. ಅದರ ಜೊತೆ ಅವರಲ್ಲಿ ಮೂಡಿದ ಸಾಹಿತ್ಯಿಕ ತಳಹದಿಯ ಬಗ್ಗೆ ವಿವರಿಸಿದರು. ಜೂನ್ 28, 1928ರಲ್ಲಿ ಹೊಂಬಾಳದಲ್ಲಿ ಜನಿಸಿದ ಕಣವಿ ಪ್ರೌಢಶಾಲೆಯಲ್ಲಿ ಇದ್ದಾಗಲೇ ಕವಿತೆ ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದರು. ಮುಂದೆ ಕನ್ನಡದ ಸಮನ್ವಯ ಕವಿ ಎಂದೇ ಪ್ರಸಿದ್ಧಿಯನ್ನು ಪಡೆದರು. ಕವಿ ಕೂಡ ಒಬ್ಬ ಸಾಮಾನ್ಯ ವ್ಯಕ್ತಿಯೇ. ಆದುದರಿಂದ ಕೌಟುಂಬಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಅವನು ಆಸ್ಥೆ ವಹಿಸಬೇಕು ಎಂದೆನ್ನುವ ಕಣವಿ ಒಬ್ಬ ಉತ್ತಮ ಕುಟುಂಬ ಜೀವಿ. ಕಾವ್ಯವೇ ತಮ್ಮ ನಿಜವಾದ ಮಾಧ್ಯಮ ಎನ್ನುವುದನ್ನು ಮನವರಿಕೆಯಾದ ಮೇಲೆ ಅದಕ್ಕೆ ನಿಷ್ಠನಾಗಿ ಉಳಿದುಕೊಂಡೆ ಎಂದರು. ಕಾವ್ಯಾಕ್ಷಿ, ಭಾವಜೀವಿ, ಆಕಾಶಬುಟ್ಟಿ, ಮಧುಚಂದ್ರ, ದೀಪದಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಎರಡು ದಡ, ನಗದಲ್ಲಿ ನೆರಳು, ಜೀವ ಧ್ವನಿ ಇವು ಅವರ ಮುಖ್ಯ ಕಾವ್ಯ ಸಂಕಲನಗಳು.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಎತ್ತು ಏರಿಗೆ ಕೋಣ ನೀರಿಗೆ

ಕಲರ್ಸ್‌ನ 'ಸೀತಾವಲ್ಲಭ'ದಲ್ಲಿ ಅವನಿಗೆ ಜ್ಞಾನ ಇದ್ದಾಗ ಅವಳು ಕೋಮಾ. ಅವಳಿಗೆ ಜ್ಞಾನ ಇದ್ದಾಗ ಅವನು ಕೋಮಾ. ಇದನ್ನು ವೀಕ್ಷಕ ಎಷ್ಟು ದಿನ ಕಾಯಬೇಕು? 5—6 ವರ್ಷ ಖಚಿತ. ಆ ದೀರ್ಘ ಅವಧಿಯಲ್ಲಿ ವೀಕ್ಷಕ ಗೊಟಕ್ ಎಂದರೂ ಆಶ್ಚರ್ಯವಿಲ್ಲ. ಒಂದು ಧಾರಾವಾಹಿಯ ಸನ್ನಿವೇಶ 'ನಾಯಕ ಮೈಸೂರಿಗೆ ನಾಯಕಿ ಹುಡುಕಿಕೊಂಡು ಬರುತ್ತಾನೆ. ಅವಳು ಸಿಕ್ಕಾಗ ತಾನು ಮೊದಲಿಂದಲೂ ಮಾಡಿದ ತಪ್ಪಿಗೆ ಕ್ಷಮೆ ಕೇಳಿ ತನ್ನ ಜತೆ ಊರಿಗೆ ಬರಲು ಅಂಗಲಾಚುತ್ತಾನೆ, ನಾಯಕಿ ತಿರಸ್ಕರಿಸುತ್ತಾಳೆ. ಮನೆಗೆ ಹೋದ ಮೇಲೆ ಅಯ್ಯೋ ಅಷ್ಟು ದೂರದಿಂದ ನನ್ನನ್ನು ಹುಡುಕಿಕೊಂಡು ಬಂದಿದ್ದ ನಾನು ಅವನನ್ನು ತಿರಸ್ಕಾರ ಮಾಡಿದ್ದು ಸರಿಯಲ್ಲ. ಅವನ ಜೊತೆ ಹೋಗಬೇಕಿತ್ತು ಎಂದು ವೇದನೆ ಪಡುತ್ತಾಳೆ. ಮುಂದೆ ಹೀಗೆ ಸರಣಿ ಸಾಗುತ್ತದೆ.

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಅಮಾನುಷ ಅತ್ತೆ

ಕಲರ್ಸ್ ಚಾನಲ್‌ನಲ್ಲಿ ಪ್ರಸಾರವಾಗುತ್ತಿರುವ 'ಇವಳು ಸುಜಾತ' ಸೀರಿಯಲ್ ಅನೇಕ ಅತಿರೇಕಗಳಿಂದ ಕೂಡಿದೆ. ಸುಜಾತಳ ಅತ್ತೆ ಅವಳನ್ನು ನಡೆಸಿಕೊಳ್ಳುತ್ತಿರುವ ರೀತಿ ಅಮಾನುಷ, ಸಹಿಸಿಕೊಳ್ಳಲು ಕಷ್ಟ. ಯಾವ ಸೊಸೆಯೂ (ಈಗಿನ ಕಾಲದಲ್ಲಿ) ಅದರಲ್ಲೂ ಹೊರಗೆ ದುಡಿಯುವ ಹೆಣ್ಣು ಗಂಡನೇ ಇಲ್ಲದಿರುವ ಅತ್ತೆಯ ಮನೆಯಲ್ಲಿ ಬಂದು ಅತ್ತೆ ಅಂದುದನ್ನೆಲ್ಲಾ ಅನಿಸಿಕೊಂಡು, ಸಹಿಸಿಕೊಂಡು ಅತ್ತೆ ಮಾವಂದಿರ ಸೇವೆ ಮಾಡುತ್ತಿರುವುದು ನಂಬಲು ಸಾಧ್ಯವಿಲ್ಲ. ಇನ್ನು ಪಾರ್ಥ ಪಾತ್ರಧಾರಿ ಅಭಯ ಆಗುವುದು, ಯಾವತ್ತೂ ಅವನು ಮಕ್ಕಳಿಗೆ ಕೋಚ್ ಮಾಡಿದ್ದು ಕಾಣುವುದೇ ಇಲ್ಲ. ಅಲ್ಲದೇ ಅಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರಿಗೂ ಆತ ಪಾರ್ಥ ಅಲ್ಲ ಅಭಯ ಅಂತ ಅನ್ನಿಸಿರುವುದು ಹೇಗೆ?

—ಕೆ. ಗಾಯತ್ರಿ, ಮೈಸೂರು